# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190-ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 21.05.2022 ಶನಿವಾರ ಬೆಳಗ್ಗೆ 10.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 190ರ ವ್ಯಾಪ್ತಿಯ ಸೋಮಸುಂದರಪಾಳ್ಯ ಸರ್ಕಾರಿ ಶಾಲೆಯ ಆವರಣದಲ್ಲಿ (ಬಿಬಿಎಂಪಿ ಕಛೇರಿ ಹತ್ತಿರ) ಬೆಂಗಳೂರು-560102 ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190-ಮಂಗಮ್ಮನಪಾಳ್ಯ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಬಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಎನ್.ಜೆ ಮ್ಯಾಥ್ಯೂ | ಮುನೇಶ್ವರ ನಗರ ಕಲ್ಯಾಣ ಕ್ಷೇಮಾಭಿವೃದ್ಧಿ ಸಂಘ | 9900134754 |
| 4 | ಶ್ರೀಮತಿ ಲಲಿತಾಂಬ | ಸಾರ್ವಜನಿಕರು | 9448063776 |
| 5 | ಶ್ರೀ ಶ್ಯೆಲೆನಕುಮಾರ್ | ಸಾರ್ವಜನಿಕರು | 9901588220 |
| 6 | ಶ್ರೀ ಮೀರಾ ರೊಟ್ಟಿ | ಸಾರ್ವಜನಿಕರು | 9741125117 |
| 7 | ಶ್ರೀ ನಾಗರಾಜ ಹೆಚ್.ವಿ | ಸಾರ್ವಜನಿಕರು | 9448574662 |
| 8 | ಶ್ರೀ ಸಿದ್ಧಪ್ಪ | ಸಾರ್ವಜನಿಕರು | 8453660722 |
| 9 | ಶ್ರೀ ಸಂತೋಷ | ಸಾರ್ವಜನಿಕರು | 6361192706 |
| 10 | ಶ್ರೀ ಸಲೀಂ. ಎಂ | ಸಾರ್ವಜನಿಕರು | 9945147597 |
| 11 | ಶ್ರೀ ಎನ್.ವೈ ನಾಗರಾಜು | ಸಾರ್ವಜನಿಕರು | 9731734619 |
| 12 | ಶ್ರೀ ನಾಗರಾಜ.ಎ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444037 |
| 13 | ಶ್ರೀ ರಮೇಶ್ ಡಿ | ಸಹಾಯಕ ಅಭಿಯಂತರರು, ವಿದ್ಯುತ್ (ಬೀದಿದೀಪ) | 9480688559 |
| 14 | ಶ್ರೀ ರಾಮಚಂದ್ರ | ಸಹಾಯಕ ಕಂದಾಯ ಅಧಿಕಾರಿಗಳು ಹೆಚ್.ಎಸ್.ಆರ್ | 9480685984 |
| 15 | ಮೊಹಮ್ಮದ ಮುಜ್ಜಮುಲ್ಲಾ | ಬಂಡೇಪಾಳ್ಯ ಪೋಲಿಸ್ ಠಾಣೆ | 8548828906 |
| 16 | ಶ್ರೀ ಹೊನ್ನುರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ಸಂ. 190) | 9480688490 |
| 17 | ಶ್ರೀ ಶಿವಕುಮಾರ್ | ಮಾರ್ಷಲ್ | 8073223596 |
| 18 | ನಾಗರಾಜು | ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾಟರ್ ಇನ್ಸ್‌ಪೆಕ್ಟರ್ | 9900095697 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಲಾಯಿತು.

(2....)

Scanned with

- **ಬೃಹತ್ ಮಳೆ ನೀರುಗಾಲುವೆ :-**
  1. 27ನೇ ಮುಖ್ಯ ರಸ್ತೆ ಮಂಗಮ್ಮನಪಾಳ್ಯ ಚರಂಡಿಯಲ್ಲಿ ನೀರು ಸರಾಹವಾಗಿ ಹರಿಯದೆ ರಸ್ತೆಯ ಮೇಲ್ಭಾಗದಲ್ಲಿ ಹರಿಯುತ್ತಿದ್ದು ಇದರಿಂದ ಸ್ಥಳೀಯ ನಿವಾಸಿಗಳಿಗೆ ದುರವಾಸನೆ ಬರುತ್ತಿರುವ ಹಿನ್ನಲೆಯಲ್ಲಿ ಆರೋಗ್ಯದ ಮೇಲೆ ದುಷ್ಪರಿಣಾಮ ಸಾಧ್ಯತೆ ಇರುತ್ತದೆ. ಆದ್ದರಿಂದ ಸ್ಥಳವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ದಿನಾಂಕ: 25.05.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಹಾಯಕ ಅಭಿಯಂತರರೊಂದಿಗೆ ಸ್ಥಳ ಪರಿಶೀಲಿಸಿ ಕ್ರಮ ಜರುಗಿಸಲಾಗುವುದೆಂದು ನೋಡಲ್ ಅಧಿಕಾರಿ ರವರು ಸಭೆಯಲ್ಲಿ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ.**
  1. ಮಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ 12 ದಿನಕ್ಕೊಮ್ಮೆ ಕುಡಿಯುವ ನೀರು ಬಿಡುತ್ತಿದ್ದು, ಇದರಿಂದ ಸ್ಥಳೀಯ ನಿವಾಸಿಗಳಿಗೆ ಅನಾಕೂಲವಾಗಿದ್ದು, ಆದ್ದರಿಂದ ಇದರ ಬಗ್ಗೆ ಗಮನ ಹರಿಸಿ ಕೂಡಲೇ ಸೂಕ್ತ ಕ್ರಮ ಜರುಗಿಸಲು ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಬೇಕೆಂದು ಶ್ರೀ ಮ್ಯಾಥ್ಯೂ ಮತ್ತು ಸಭೆಯಲ್ಲಿ ಹಾಜರಿದ್ದ ಸ್ಥಳೀಯ ಸಾರ್ವಜನಿಕರು ನೋಡಲ್ ಅಧಿಕಾರಿಗಳ ಗಮನಕ್ಕೆ ತಂದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ನಾಗರಾಜು. ಎ (ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಮುಂದಿನ ದಿನಗಳಲ್ಲಿ ವಾರಕ್ಕೊಮ್ಮೆ ನೀರು ಬಿಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
  2. ವಾರ್ಡ್ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಒಳಚರಂಡಿ ನೀರು ಬಿಡುತ್ತಿದ್ದು, ಇದರಿಂದ ಸ್ಥಳೀಯ ನಿವಾಸಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಕೂಡಲೇ ಸೂಕ್ತ ಕ್ರಮ ವಹಿಸಬೇಕೆಂದು ಮ್ಯಾಥ್ಯೂ ಮತ್ತು ಸ್ಥಳೀಯ ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ನಾಗರಾಜು. ಎ (ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಸ್ಥಳೀಯ ನಿವಾಸಿಗಳು ಒಳಚರಂಡಿ ಮಾರ್ಗಕ್ಕೆ ಸಂಪರ್ಕವನ್ನು ಕಲ್ಪಿಸಿಕೊಳ್ಳದೆ ಚರಂಡಿಗೆ ಮಾರ್ಗಕ್ಕೆ ಒಳಚರಂಡಿ ನೀರು ಬಿಡುತ್ತಿದ್ದು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ರಸ್ತೆ ಅಗೆಯುತ್ತಿರುವುದರಿಂದ ಒಳಚರಂಡಿ ಮಾರ್ಗಗಳು ಸಹ ಹಾನಿಯಾಗಿ ಈ ಸಮಸ್ಯೆ ಉದ್ಭವಾಗಿದೆ ಇಂತಹ ಪ್ರಕರಣಗಳು ಪತ್ತೆಹಚ್ಚಿ ಚರಂಡಿ ಮಾರ್ಗಕ್ಕೆ ಒಳಚರಂಡಿ ನೀರು ಬಿಡದಂತೆ ಎಚ್ಚರಿಕೆ ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಮತ್ತು ಸ್ಥಳೀಯ ನಿವಾಸಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಹಕರಿಬೇಕೆಂದು ಸಭೆಯಲ್ಲಿ ತಿಳಿಸಿದರು.

- **ಸಂಚಾರಿ ಪೋಲಿಸ್ ಠಾಣೆ :-**
  1. ವಾರ್ಡ್ ವ್ಯಾಪ್ತಿಯ 27ನೇ ಅಡ್ಡ ರಸ್ತೆಯಲ್ಲಿ Test Drive ಸಲುವಾಗಿ ಕಾರುಗಳನ್ನು ತುಂಬ ವೇಗವಾಗಿ ಓಡುಸುತ್ತಿದ್ದು, ಸಂಚಾರ ದಟ್ಟನೆ ಇರುವ ರಸ್ತೆಯಾಗಿದ್ದು, ಇದರಿಂದ ಅಪಘಾತವಾಗುವ ಸಂಭವಿಸುವ ಸಾಧ್ಯತೆ ಇದ್ದು, ಇದನ್ನು ನಿಯಂತ್ರಿಸಬೇಕು ಹಾಗೂ ವಾರ್ಡ್ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಸಂಚಾರ ದಟ್ಟನೆಯಾಗುತ್ತಿದ್ದು, ಇದರಿಂದ ಸಂಚಾರಕ್ಕೆ ಅನಾನುಕೂಲವಾಗುತ್ತಿದ್ದು, ಇದನ್ನು ನಿಯಂತ್ರಿಸಲು ಕ್ರಮಕೈಗೊಳ್ಳಬೇಕೆಂದು ಶ್ರೀಮತಿ ಮೀರಾ ಮತ್ತು ಶೈಲೇಶ್‌ಕುಮಾರ್ ರವರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ನೋಡಲ್ ಅಧಿಕಾರಿ ರವರು ಸಭೆಗೆ ಸಂಚಾರಿ ಪೋಲಿಸ್ ಇನ್ಸ್‌ಪೆಕ್ಟರ್ ರವರು ಗೈರು ಹಾಜರಾಗಿದ್ದು, ಸದರಿಯವರಿಗೆ ಈ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- **ಆರೋಗ್ಯ ಇಲಾಖೆ**
  1. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಚರ್ಚಿಸಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಮಾಂಸದ ಅಂಡಿಗಳ ವಿವರ ಒದಗಿಸುವಂತೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಶ್ರೀ ಹೊನ್ನೂರು ಪಾಷ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮುಂದಿನ ಸಭೆಯಲ್ಲಿ ಒದಗಿಸುವಂತೆ ಸೂಚಿಸಿದ್ದರು. ಈ ಬಗ್ಗೆ ಸದರಿಯವರು ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದರು.
  2. ಮಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯ 27ನೇ ಅಡ್ಡ ರಸ್ತೆಯ ಬದಿಯಲ್ಲಿ ಕಸ ಸಂಗ್ರಹಣೆ ಮಾಡಿದ್ದು, ಕೂಡಲೇ ವಿಲೇವಾರಿ ಮಾಡುವಂತೆ ಶ್ರೀಮತಿ ಮೀರಾ ರವರು ವಾರ್ಡ್ ಸಭೆಯ ಗಮನಕ್ಕೆ ತಂದರು ಈ ಬಗ್ಗೆ ನೋಡಲ್ ಅಧಿಕಾರಿಗಳು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸ್ಥಳವನ್ನು ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲು ಸೂಚಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಹೊನ್ನೂರು ಪಾಷ ಕಿರಿಯ ಆರೋಗ್ಯ ಪರಿವೀಕ್ಷಕ ರವರು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

(3.....)

Scanned with

- **ಕಂದಾಯ ಇಲಾಖೆ**

1. ಹಿಂದಿನ ಸಭೆಯಲ್ಲಿ ಚರ್ಚಿಸಿರುವ ಬಗ್ಗೆ ಇಂದಿನ ಸಭೆಯಲ್ಲಿ ಸರ್ವೆ ನಂ. 44ರ ಬೌಂಡರಿ ಗುರುತಿಸಿಕೊಡಲು ಪ್ರಸ್ತಾಪಿಸಲಾಗಿದ್ದು, ಈ ಬಗ್ಗೆ ಶ್ರೀ ರಾಮಚಂದ್ರ, ಸಹಾಯಕ ಕಂದಾಯ ಅಧಿಕಾರಿಗಳು, ಹೆಚ್.ಎಸ್.ಆರ್ ಉಪವಿಭಾಗ ರವರಿಗೆ ಮಾಹಿತಿಯನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಬಗ್ಗೆ ಶ್ರೀ ರಾಮಚಂದ್ರ, ಸಹಾಯಕ ಕಂದಾಯ ಅಧಿಕಾರಿಗಳು, ರಾಜಸ್ವ ನೀರಿಕ್ಷಕರು ರವರಿಗೆ ಪತ್ರ ಬರೆಯಲಾಗಿದೆ, ಅವರಿಂದ ಮಾಹಿತಿ ಬಂದ ನಂತರ ಮಾಹಿತಿ ಒದಗಿಸಲಾಗುವುದೆಂದು ತಿಳಿಸಿರುತ್ತಾರೆ. ಸಭೆಯಲ್ಲಿ ದೂರವಾಣಿ ಮುಖಾಂತರ ರಾಜಸ್ವ ನಿರೀಕ್ಷಕರಿಗೆ ಕರೆ ಮಾಡಿ ಸದರಿ ವಿಷಯದ ಬಗ್ಗೆ ಚರ್ಚಿಸಲು ದಿನಾಂಕವನ್ನು ನಿಗದಿಪಡಿಸುವಂತೆ ಕೋರಿರುತ್ತಾರೆ. ಹಾಗೂ ಸದರಿ ಸ್ವತ್ತನ್ನು ಬಿಬಿಎಂಪಿ ಗೆ ಹಸ್ತಾಂತರಿಸಿವುದಿಲ್ಲ ತಾಲ್ಲೂಕು ಕಛೇರಿಯಿಂದ (ರಾಜಸ್ವ ನೀರಿಕ್ಷಕರಿಗೆ) ನೋಟಿಸ್ ಜಾರಿ ಮಾಡುವಂತೆ ತಾಲ್ಲೂಕ ಕಛೇರಿಗೆ ಪತ್ರ ಬರೆಯಲಾಗಿದೆ ಎಂದು ಈ ಬಗ್ಗೆ ಸಭೆಗೆ ತಿಳಿಸಿದರು.

- **ಕಾಮಗಾರಿ :**

1. ವಾರ್ಡ್ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು, ಮಳೆಗಾಲ ಸಮೀಪಿಸುತ್ತಿದ್ದು, ನೀರು ಸರಾಗವಾಗಿ ಹರಿಸಲು ಚರಂಡಿಯಲ್ಲಿ ತುಂಬಿಕೊಂಡಿರುವ ಹೂಳೇತ್ತ ಬೇಕೆಂದು ಕವರಿಂಗ್ ಸ್ಲ್ಯಾಬ್ ಹಾನಿಯಾಗಿದ್ದು, ಇನ್ನೂ ಕೆಲವು ಕಡೆ ಇಲ್ಲದೆ ಇರುವುದರಿಂದ ಕಂಡು ಬಂದಿದ್ದು, ಅಂತಹ ಸ್ಥಳಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ವಹಿಸಬೇಕೆಂದು ಸಭೆಯಲ್ಲಿ ಗಮನಕ್ಕೆ ತಂದರು ಈ ಬಗ್ಗೆ ಕಾರ್ಯದರ್ಶಿ/ ಸಹಾಯಕ ಅಭಿಯಂತರರು, ಈ ಸಾಲಿನ ಕ್ರಿಯಾಯೋಜನೆ ಅಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ಅನುದಾನದಡಿಯಲ್ಲಿ ಕವರಿಂಗ್ ಸ್ಲ್ಯಾಬ್ ಅವಳಡಿಸಲು ಸೇರಿಸಲಾಗಿದೆ ಹಾಗೂ ಹೂಳೇತ್ತಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ, ಸಾರ್ವಜನಿಕರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopala Babu
ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಆಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಆಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಆಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with